# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1235/2021
ಪಿ.ಓ. ಎಆರ್‌ಇ-06 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:24/11/2021.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀಮತಿ. ಶಶಿಕಲಾ ಪಾದಗಟ್ಟಿ ಕೋಂ ಸುರೇಶ ಪಾದಗಟ್ಟಿ, ತಹಶೀಲ್ದಾರರು ಅಫಜಲ್‌ಪುರ ತಾಲ್ಲೂಕು ಕಛೇರಿ, ಅಫಜಲ್‌ಪುರ, ಕಲಬುರ್ಗಿ ಜಿಲ್ಲೆ, ಹಾಲಿ ಕರ್ತವ್ಯ: ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ರವರು ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.**

******

1. ಕಲಬುರ್ಗಿ ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆಯ ಪೋಲಿಸ್ ನಿರೀಕ್ಷಕರು, (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀಮತಿ. ಶಶಿಕಲಾ ಪಾದಗಟ್ಟಿ ಕೋಂ ಸುರೇಶ ಪಾದಗಟ್ಟಿ, ತಹಶೀಲ್ದಾರರು ಅಫಜಲ್‌ಪುರ ತಾಲ್ಲೂಕು ಕಛೇರಿ, ಅಫಜಲ್‌ಪುರ, ಕಲಬುರ್ಗಿ ಜಿಲ್ಲೆ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ), **ಶ್ರೀ ಶಿವಲಿಂಗಯ್ಯ ಬಿನ್ ಬಸಯ್ಯಮಠ, ವಾಸ: ಮಣ್ಣೂರ, ಅಫಜಲ್‌ಪುರ, ಕಲಬುರ್ಗಿ ಜಿಲ್ಲೆ** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ). ಇವರು ಎದುರುದಾರರನ್ನು ಅವರ ಕೆಲಸದ ನಿಮಿತ್ತ ಭೇಟಿಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

i) ದೂರುದಾರರಾದ **ಶ್ರೀ ಶಿವಲಿಂಗಯ್ಯ ಬಿನ್ ಬಸಯ್ಯಮಠ, ವಾಸ: ಮಣ್ಣೂರ, ಅಫಜಲ್‌ಪುರ, ಕಲಬುರ್ಗಿ ಜಿಲ್ಲೆ** ಇವರು 2007ನೇ ಸಾಲಿನಿಂದ ಕರಜಗಿ ಗ್ರಾಮದ ನಾಡಕಛೇರಿ ಕರಜಗಿಯಲ್ಲಿ ಡಾಟಾ ಎಂಟ್ರಿ ಆಪರೇಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಆಗಸ್ಟ್ 2017ರ 6-7 ತಿಂಗಳ ಹಿಂದೆ ಎದುರುದಾರರು ತಹಶೀಲ್ದಾರರಾಗಿ ಅಫಜಲ್‌ಪುರ ತಹಶೀಲ್ದಾರ್ ಕಛೇರಿಗೆ ಬಂದಿದ್ದು, ಎದುರುದಾರರು ಈಗ್ಗೆ ಸುಮಾರು ಎರಡು ತಿಂಗಳ ಹಿಂದೆ ದೂರುದಾರರನ್ನು ಅವರ ಕಛೇರಿಗೆ ಕರೆಯಿಸಿ ಸಾರ್ವಜನಿಕರು ದೂರುದಾರರ ವಿರುದ್ಧ ದೂರು

ಸಲ್ಲಿಸಿದ ಬಗ್ಗೆ ತಿಳಿಸಿ, ದೂರುದಾರರ ವಿರುದ್ಧ ಮಾನ್ಯ ಸಹಾಯಕ ಆಯುಕ್ತರು ಕಲಬುರ್ಗಿರವರಿಗೆ ವರದಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಆಗ ದೂರುದಾರರು ಅವರ ವಿರುದ್ಧ ನಾಡ ಕಛೇರಿ ಕರಜಗಿಯಲ್ಲಿ ಯಾವುದೇ ದೂರು ಇರುವುದಿಲ್ಲ, ಏಕೆ ನನ್ನ ವಿರುದ್ಧ ದೂರು ಸಲ್ಲಿಸಿದ್ದೀರಿ ಎಂದು ದೂರುದಾರರು ಕೇಳಿದ್ದಕ್ಕೆ, ಸಾರ್ವಜನಿಕರು ನೇರವಾಗಿ ದೂರುದಾರರ ವಿರುದ್ಧ ದೂರು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

ಕೆಲವು ದಿನಗಳ ನಂತರ ಎದುರುದಾರರು ಕರಜಗಿ ನಾಡಕಛೇರಿಗೆ ಬಂದಾಗ ದೂರುದಾರರು ಸಾರ್ವಜನಿಕರು ನೀಡಿದ ಅರ್ಜಿಯ ಬಗ್ಗೆ ಏನಾದರೂ ಸಹಾಯ ಮಾಡಿರಿ ಮತ್ತು ಎ.ಸಿ. ರವರ ಕಾರ್ಯಾಲಯಕ್ಕೆ ಸಲ್ಲಿಸಿದ ವರದಿಯ ಬಗ್ಗೆ ಬಗೆಹರಿಸಿ ಅಂತ ಕೇಳಿಕೊಂಡಾಗ ಎದುರುದಾರರು ಎ.ಸಿ.ರವರಿಗೆ ನೀಡಿದ ವರದಿಯನ್ನು ಹಿಂಪಡೆದು ದೂರುದಾರರಿಗೆ ಎಚ್ಚರಿಕೆ ಪತ್ರ ನೀಡುತ್ತೇನೆ. ಅದಕ್ಕೆ ದೂರುದಾರರು 1,00,000/– ರೂ. ಲಂಚ ಕೊಡಬೇಕು, ಕೊಡದೇ ಇದ್ದರೆ ದೂರುದಾರರು ಕರ್ತವ್ಯ ನಿರ್ವಹಿಸುವ ಸ್ಥಳಕ್ಕೆ ಬೇರೆಯವರನ್ನು ನೇಮಕ ಮಾಡಿಕೊಳ್ಳುತ್ತೇನೆ ಅಂತ ಹೇಳಿದ್ದು ಇರುತ್ತದೆ. ಅಲ್ಲದೆ ಮೊದಲು 50,000/– ರೂ. ನೀಡು, ಕೆಲಸ ಆದ ನಂತರ 50,000/– ರೂ.ಗಳನ್ನು ನೀಡುವಂತೆ ಲಂಚದ ಹಣಕ್ಕಾಗಿ ಎದುರುದಾರರು ಬೇಡಿಕೆ ಇಟ್ಟರುತ್ತಾರೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ್ದರಿಂದ, ದೂರುದಾರರು ದಿ: 29/08/2017 ರಂದು ಸಂಜೆ 5.35 ಗಂಟೆಗೆ ಎದುರುದಾರರ ಕಛೇರಿಗೆ ಹೋಗಿ, ಕಛೇರಿಯಲ್ಲಿ ಭೇಟಿಯಾಗಿ ದೂರುದಾರರು ಕೆಲಸದ ಬಗ್ಗೆ ವಿಚಾರಿಸಿದ್ದಾಗ 1,00,000/– ರೂ. ಹಣಕ್ಕೆ ಬೇಡಿಕೆ ಇಟ್ಟಿದ್ದು, ಅದನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿದ್ದು ಇರುತ್ತದೆ. ನಂತರ ಎದುರುದಾರರು ಅವರ ಮೊಬೈಲ್ ನಂ.94485 81404 ಗೆ ದೂರುದಾರರ ಮೊಬೈಲ್ ನಂ.97315 18513 ರಿಂದ ಕರೆಮಾಡಿ ಮಾತನಾಡಿದ್ದು, ಆ ಸಂಭಾಷಣೆಯು ಸಹ ಮೊಬೈಲ್‌ನಲ್ಲಿ ಧ್ವನಿಮುದ್ರಿತವಾಗಿರುತ್ತದೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ್ದರಿಂದ, ದೂರುದಾರರು ದಿ: 31/08/2017 ರಂದು ಕಲಬುರ್ಗಿ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಆರಕ್ಷಕ ಉಪಾಧೀಕ್ಷಕರಿಗೆ ದೂರನ್ನು ಸಲ್ಲಿಸಿರುತ್ತಾರೆ. ಆ ಬಗ್ಗೆ ಕಲಬುರ್ಗಿ ಎ.ಸಿ.ಬಿ. ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ದೂರನ್ನು ಪಡೆದು ಅವರ ಠಾಣೆಯ ಗುನ್ನೆ ನಂ. 08/2017ರಲ್ಲಿ ಕಲಂ 7, 13(1)(ಡಿ) ಜೊತೆಗೆ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ರಡಿಯಲ್ಲಿ ಎದುರುದಾರರ ವಿರುದ್ಧ ಪ್ರ.ವ.ವ. ವರದಿ ದಾಖಲು ಮಾಡಿರುತ್ತಾರೆ.

ii) ದಿ: 31/08/2017 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಸಮಯದಲ್ಲಿ ಇಬ್ಬರು ಪಂಚರನ್ನು ಠಾಣೆಗೆ ಕರೆಸಿ, ದೂರುದಾರರನ್ನು ಅವರಿಗೆ ಪರಿಚಯಿಸಿ, ದೂರಿನ ಅಂಶಗಳನ್ನು ತಿಳಿಸಿರುತ್ತಾರೆ. ಪಂಚಸಾಕ್ಷಿದಾರರು ತನಿಖಾಧಿಕಾರಿಗಳಿಗೆ ತನಿಖೆಗೆ ಸಹಕರಿಸಲು ಒಪ್ಪಿರುತ್ತಾರೆ.

ನಂತರ ತನಿಖಾಧಿಕಾರಿಯವರು ದೂರುದಾರರ ಮೊಬೈಲ್‌ನಲ್ಲಿ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದಾಗಿ ತಿಳಿಸಿ, ಮೊಬೈಲನ್ನು ಹಾಜರುಪಡಿಸಿದ್ದು, ಅದರಲ್ಲಿರುವ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ, ಆ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿರುತ್ತಾರೆ. ನಂತರ, ಆ ಸಂಭಾಷಣೆಯನ್ನು ಕಂಪ್ಯೂಟರ್ ಮೂಲಕ ಎರಡು ಸಿ.ಡಿ.ಗಳಿಗೆ ವರ್ಗಾಯಿಸಿ, ಆ ಸಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯು ಎದುರುದಾರರಿಗೆ ಕೊಡಲು ತಂದಿರುವ ಲಂಚದ ಹಣವನ್ನು ಹಾಜರುಪಡಿಸಲು ದೂರುದಾರರಿಗೆ ತಿಳಿಸಿದಾಗ ದೂರುದಾರರು 2,000/- ರೂ. ಮುಖಬೆಲೆಯ 25 ನೋಟುಗಳನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಯ ಸೂಚನೆ ಮೇರೆಗೆ ಪಂಚಸಾಕ್ಷಿ-1 ಆ ನೋಟುಗಳ ವಿವರಗಳನ್ನು ಪರಿಶೀಲಿಸಿ ಹೇಳಿದಂತೆ ಪಂಚಸಾಕ್ಷಿ-2 ರವರು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ ಮತ್ತು ಪಂಚನಾಮೆಯಲ್ಲಿ ಸಿಬ್ಬಂದಿ ನಮೂದಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯು ಸಿಬ್ಬಂದಿ ಮುಖಾಂತರ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿ ಪಂಚಸಾಕ್ಷಿ-1 ರವರ ಮುಖಾಂತರ ದೂರುದಾರರ ಶರ್ಟಿನ ಎಡಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ತನಿಖಾಧಿಕಾರಿಯು ದೂರುದಾರರಿಗೆ ಎದುರುದಾರರ ಹತ್ತಿರ ಹೋಗಿ ಕೆಲಸದ ಬಗ್ಗೆ ವಿಚಾರಿಸಿದಾಗ ಎದುರುದಾರರು ಲಂಚದ ಹಣ ಕೇಳಿದಾಗ ಮಾತ್ರ ಪುಡಿಲೇಪಿತ ನೋಟುಗಳನ್ನು ನೀಡಬೇಕೆಂದು ಹಾಗೂ ಒಂದುವೇಳೆ ಅವರು ಬೇರೆಯವರ ಕೈಗೆ ಹಣಕೊಡುವಂತೆ ಹೇಳಿದಾಗ ಅಥವಾ ಬೇರೆ ಯಾವುದೇ ಸ್ಥಳದಲ್ಲಿ ಇಟ್ಟು ಹೋಗಲು ತಿಳಿಸಿದಾಗ ಅವರು ಹೇಳಿದಂತೆ ಹಣವನ್ನು ಕೊಟ್ಟು ಹೊರಬಂದು ಕರವಸ್ತ್ರದಿಂದ ಮುಖ ಒರೆಸಿಕೊಳ್ಳುವುದರ ಮೂಲಕ ಸನ್ನೆ ಮಾಡಲು ತಿಳಿಸಿರುತ್ತಾರೆ ಮತ್ತು ನೆರಳುಸಾಕ್ಷಿಗೆ ದೂರುದಾರ ಮತ್ತು ಎದುರುದಾರರ ನಡುವೆ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿ, ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ಎಲ್ಲರ ಸಮಕ್ಷಮ ನಿರ್ವಹಿಸಿರುತ್ತಾರೆ.

iii) ಅದೇ ದಿನ ಅಂದರೆ, ದಿ: 31/08/2017ರಂದು ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿಗಳು ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಗಳು ಸಂಜೆ ಸುಮಾರು 6.30ರ ಸಮಯಕ್ಕೆ ಅಫಜಲ್‌ಪುರ ತಹಶೀಲ್ದಾರ್ ಕಛೇರಿಯ ಹತ್ತಿರ ಬಂದಿರುತ್ತಾರೆ. ದೂರುದಾರರು ಅವರ ಮೊಬೈಲ್ ನಂ.97315 18513 ರಿಂದ ಎದುರುದಾರರ ಮೊಬೈಲ್ ನಂ.94485 81404 ಗೆ ಕರೆಮಾಡಿದಾಗ ಎದುರುದಾರರು ಕಛೇರಿಯಲ್ಲಿರುವುದಾಗಿ ತಿಳಿಸಿ, ದೂರುದಾರರಿಗೆ ಬರುವಂತೆ ತಿಳಿಸಿದ ಮೇರೆಗೆ ದೂರುದಾರರು ನೆರಳುಸಾಕ್ಷಿಯೊಂದಿಗೆ ಎದುರುದಾರರ ಕಛೇರಿಗೆ ಬಂದು ಅವರ ಕೆಲಸದ ಬಗ್ಗೆ ಕೇಳಿದಾಗ ಎದುರುದಾರರು ಲಂಚದ ಹಣವನ್ನು ಕೇಳಿ, ಅದನ್ನು ದೂರುದಾರರು ನೀಡಲು ಬಂದಾಗ ಶಿವಾನಂದ ಎಂಬುವವರ ಕೈಯಲ್ಲಿ ಕೊಡಲು ತಿಳಿಸಿದ ಮೇರೆಗೆ ದೂರುದಾರರು ಅಲ್ಲಿಂದ ಹೊರಬಂದು ದೂರುದಾರರ ಮೊಬೈಲ್ ನಂಬರಿನಿಂದ ಶಿವಾನಂದರವರ ಮೊಬೈಲ್ ನಂ.94499 07153 ಕ್ಕೆ ಕರೆಮಾಡಿ, ತಹಶೀಲ್ದಾರ್ ಮೇಡಂರವರು ನಿಮ್ಮ ಕೈಯಲ್ಲಿ ಹಣಕೊಡಲು ಹೇಳಿದ್ದಾರೆ ಬಂದು ತೆಗೆದುಕೊಳ್ಳಿ ಅಂತ ತಿಳಿಸಿದ ಮೇರೆಗೆ,

ಅವರು ಅಲಮೇಲಗೆ ಹೋಗುವ ಮುಖ್ಯರಸ್ತೆಯ ಪಕ್ಕದಲ್ಲಿರುವ ಮಸೀದಿ ಹತ್ತಿರ ನಿಂತುಕೋ ಅಂತ ತಿಳಿಸಿದ್ದು, ಅದರಂತೆ ದೂರುದಾರರು ತನಿಖಾಧಿಕಾರಿಯವರಿಗೆ ಸದರಿ ವಿಷಯ ತಿಳಿಸಿ ಮಸೀದಿ ಹತ್ತಿರ ದೂರುದಾರರು ನಿಂತುಕೊಂಡಿದ್ದಾಗ, ಸುಮಾರು ಸಮಯ ರಾತ್ರಿ 7.10ರ ಸಮಯದಲ್ಲಿ ಶಿವಾನಂದರವರು ದೂರುದಾರರ ಬಳಿ ಬಂದು, ಹಣ ಕೇಳಿ ದೂರುದಾರರು ನೀಡಿದಾಗ ಅದನ್ನು ಶಿವಾನಂದರವರು ಸ್ವೀಕರಿಸಿ, ತಮ್ಮ ಎರಡೂ ಕೈಗಳಿಂದ ಎಣಿಕೆ ಮಾಡಿ ಶರ್ಟಿನ ಎಡಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ದೂರುದಾರರು ಕರವಸ್ತ್ರದಿಂದ ಮುಖವರೆಸಿ ಕೊಳ್ಳುವ ಮೂಲಕ ಸನ್ನೆ ನೀಡಿರುತ್ತಾರೆ. ಆಗ ತನಿಖಾಧಿಕಾರಿ ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ಧಾವಿಸಿ ದೂರುದಾರರ ಬಳಿ ಬಂದಿದ್ದು, ದೂರುದಾರರು ಶಿವಾನಂದನನ್ನು ತೋರಿಸಿದಾಗ, ಅವರನ್ನು ಸುತ್ತುವರೆದು, ಅವರ ಎರಡೂ ಕೈಗಳನ್ನು ಹಿಡಿದುಕೊಂಡಿದ್ದು, ಸದರಿ ಸ್ಥಳವು ಸಾರ್ವಜನಿಕ ಸ್ಥಳವಾಗಿದ್ದರಿಂದ ತನಿಖೆಗೆ ಅಡಚಣೆ ಆಗಬಹುದೆಂದು ಶಿವಾನಂದರವರನ್ನು ಇಲಾಖಾ ವಾಹನದಲ್ಲಿ ಕೂರಿಸಿ, ಶಿವಾನಂದರವರ ಮೊಬೈಲ್ ನಂಬರಿನಿಂದ ಎದುರುದಾರರ ಮೊಬೈಲ್ ನಂಬರಿಗೆ ಕರೆಮಾಡಿ ಮಾತನಾಡಿದ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಳ್ಳುವಂತೆ ತಿಳಿಸಿದ್ದು, ಆಗ ಶಿವಾನಂದರವರು ಅವರ ಮೊಬೈಲ್‌ನಲ್ಲಿ ಸಂಭಾಷಣೆಯನ್ನು ಧ್ವನಿಮುದ್ರಿಸುವ ಅವಕಾಶವಿಲ್ಲ ಅಂತ ತಿಳಿಸಿದಾಗ ತನಿಖಾಧಿಕಾರಿಯು ಅವರ ಮೊಬೈಲ್ ನಂ. 78921 39454 ರಿಂದ ಎದುರುದಾರರ ಮೊಬೈಲ್ ನಂ: 89706 67193ಕ್ಕೆ ಕರೆ ಮಾಡಿದಾಗ ಎದುರುದಾರರು ಶಿವಾನಂದನಿಗೆ ಗೃಹಕಛೇರಿಗೆ ಹಣ ತೆಗೆದುಕೊಂಡು ಬರಲು ತಿಳಿಸಿದ್ದು, ತನಿಖಾಧಿಕಾರಿಯು ಅವರ ತಂಡದವರೊಂದಿಗೆ ಎದುರುದಾರರ ಗೃಹಕಛೇರಿಯ ಸಮೀಪ ಬಂದು ನಿಂತುಕೊಂಡಿದ್ದು, ತನಿಖಾಧಿಕಾರಿಯ ಸೂಚನೆಯಂತೆ ಶಿವಾನಂದ ನೆರಳುಸಾಕ್ಷಿಯೊಂದಿಗೆ ಎದುರುದಾರರ ಗೃಹಕಛೇರಿಯ ಒಳಗಡೆ ಬಂದು ಶಿವಾನಂದ ನೀಡಿದ ಲಂಚದ ಹಣವನ್ನು ಎದುರುದಾರರು ಸ್ವೀಕರಿಸಿದ ನಂತರ ಹೊರಗಡೆ ಬಂದು ನೆರಳುಸಾಕ್ಷಿ ಸನ್ನೆ ಮಾಡಿದ್ದು, ಆಗ ತನಿಖಾ ತಂಡದವರು ಎದುರುದಾರರ ಮನೆ ಒಳಗೆ ಬಂದಾಗ ನೆರಳುಸಾಕ್ಷಿಯು ಎದುರುದಾರರನ್ನು ತೋರಿಸಿದ ಮೇರೆಗೆ, ತನಿಖಾಧಿಕಾರಿಯು ಗುರುತಿನ ಚೀಟಿಯನ್ನು ತೋರಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿ, ಎದುರುದಾರರ ಎರಡೂ ಮುಂಗೈಗಳನ್ನು ಹಿಡಿದುಕೊಂಡಾಗ ಸಮಯ ಸುಮಾರು ರಾತ್ರಿ 7.30 ಆಗಿರುತ್ತದೆ. ತನಿಖಾಧಿಕಾರಿಯು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣ ಎಲ್ಲಿ ಎಂದು ಕೇಳಿದಾಗ ಎದುರುದಾರರು ಗೃಹಕಛೇರಿಯ ಸೆಟ್‌ಔಟ್‌ನಲ್ಲಿರುವ ಟೇಬಲ್ ಮೇಲೆ ಇರುವ ದಿನಪತ್ರಿಕೆಯಲ್ಲಿ ಇಟ್ಟಿರುತ್ತೇನೆ ಎಂದು ತಿಳಿಸಿದ್ದು, ಅದನ್ನು ತನಿಖಾಧಿಕಾರಿಯವರು ಹಾಜರುಪಡಿಸಲು ತಿಳಿಸಿದಾಗ ಎದುರುದಾರರು ಹಣವನ್ನು ತೆಗೆದು ಟೇಬಲ್ ಮೇಲೆ ಇಟ್ಟಿರುತ್ತಾರೆ.

iv) ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಮೂರು ಬಟ್ಟಲುಗಳಲ್ಲಿ ಪಡೆದುಕೊಂಡು, ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳನ್ನು ಅದ್ದಿಸಿ ತೊಳೆದಾಗ ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು

ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳನ್ನು ಅದ್ದಿಸಿ ತೊಳೆದಾಗ
ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಸ್ವಲ್ಪ ಹತ್ತಿಯನ್ನು
ತೆಗೆದುಕೊಂಡು ಎದುರುದಾರರು ಲಂಚದ ಹಣವನ್ನು ಪಡೆದು ಇಟ್ಟಿದ್ದ
ದಿನಪತ್ರಿಕೆಯ ಮೇಲೆ ಉಜ್ಜಿ, ಆ ಹತ್ತಿಯನ್ನು ಮೂರನೇ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ
ಅದ್ದಿಸಿದಾಗ ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಮತ್ತೆ ಸ್ವಲ್ಪ
ಹತ್ತಿಯನ್ನು ತೆಗೆದುಕೊಂಡು ಹಣವನ್ನು ಪಡೆದು ಇಟ್ಟಿದ್ದ ಮೇಲುಗಡೆ ಇದ್ದ
ವಿಜಯವಾಣಿ ದಿನಪತ್ರಿಕೆ ಮೇಲೆ ಉಜ್ಜಿ ಅದನ್ನು ಕೂಡ ಸೋಡಿಯಂ
ಕಾರ್ಬೋನೆಟ್ ದ್ರಾವಣದಲ್ಲಿ ಅದ್ದಿಸಿದಾಗ ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ
ತಿರುಗಿರುತ್ತದೆ. ಆ ಎಲ್ಲಾ ದ್ರಾವಣಗಳನ್ನು ತನಿಖಾಧಿಕಾರಿಯವರು ವಶಕ್ಕೆ
ಪಡೆದಿರುತ್ತಾರೆ.

ತನಿಖಾಧಿಕಾರಿಯವರ ಸೂಚನೆಯಂತೆ ಎದುರುದಾರರು ಟೇಬಲ್ ಮೇಲೆ
ಇಟ್ಟಿದ್ದ ಲಂಚದ ಹಣವನ್ನು ಪಂಚಸಾಕ್ಷಿ-1 ತೆಗೆದುಕೊಂಡು, ಪಂಚಸಾಕ್ಷಿ-2ರವರ
ಬಳಿ ನೋಟುಗಳ ವಿವರಗಳನ್ನು ಹೊಂದಿದ್ದ ಹಾಳೆ ಇದ್ದು, ಆ ನೋಟುಗಳ
ವಿವರಗಳನ್ನು ಹೋಲಿಕೆ ಮಾಡಿ ನೋಡಿದಾಗ ಆ ನೋಟುಗಳ ವಿವರಗಳು
ಹಾಳೆಯಲ್ಲಿ ನಮೂದಿಸಿದ ನೋಟುಗಳಿಗೆ ತಾಳೆಯಾದ್ದರಿಂದ ಆ ನೋಟುಗಳನ್ನು
ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಸೋಡಿಯಂ
ಕಾರ್ಬೋನೆಟ್ ದ್ರಾವಣವನ್ನು ತಯಾರಿಸಿ ಮೂರು ಬಟ್ಟಲುಗಳಲ್ಲಿ ಪಡೆದುಕೊಂಡು,
ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಶಿವಾನಂದರವರ ಬಲಗೈ ಬೆರಳನ್ನು ಅದ್ದಿಸಿ
ತೊಳೆದಾಗ ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು
ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಶಿವಾನಂದರವರ ಎಡಗೈ ಬೆರಳನ್ನು ಅದ್ದಿಸಿ ತೊಳೆದಾಗ
ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಶಿವಾನಂದರವರಿಗೆ ಬೇರೆ
ಶರ್ಟನ್ನು ನೀಡಿ, ಅವರು ಧರಿಸಿದ ಶರ್ಟನ್ನು ಬಿಚ್ಚಿಸಿ, ಶರ್ಟಿನ ಎಡಭಾಗದ
ಜೇಬನ್ನು ತಿರುಗಿಸಿ, ಮೂರನೇ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ಆ
ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯವರು ಮೂರು
ಬಟ್ಟಲಿನಲ್ಲಿದ್ದ ದ್ರಾವಣವನ್ನು ಪ್ರತ್ಯೇಕವಾಗಿ ಶೇಖರಿಸಿ, ದ್ರಾವಣಗಳನ್ನು ಮತ್ತು
ಶರ್ಟನ್ನು ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯವರು ದೂರುದಾರರ ಮತ್ತು ಎದುರುದಾರರ ನಡುವೆ
ಆದ ಸಂಭಾಷಣೆಯ ಸಿ.ಡಿ.ಯನ್ನು ಕೇಳಿಸಿದಾಗ ಎದುರುದಾರರ ಕಛೇರಿಯಲ್ಲಿ
ಕರ್ತವ್ಯ ನಿರ್ವಹಿಸುವ ಪ್ರೇಂ ಸಿಂಗ್ ಎಂಬುವವರು ಎದುರುದಾರರ ಧ್ವನಿಯನ್ನು
ಗುರುತಿಸಿರುತ್ತಾರೆ. ಅಲ್ಲದೆ ಶಿವಾನಂದರವರು ತನಿಖಾಧಿಕಾರಿಯ ಮೊಬೈಲ್‌ನಿಂದ
ಎದುರುದಾರರ ಮೊಬೈಲ್‌ಗೆ ಮಾತನಾಡಿದ ಸಂಭಾಷಣೆಯನ್ನು ಪಂಚನಾಮೆಯಲ್ಲಿ
ತನಿಖಾಧಿಕಾರಿಯವರು ಲಿಪಿಕರಿಸಿಕೊಂಡಿರುತ್ತಾರೆ ಮತ್ತು ಸದರಿ ಸಂಭಾಷಣೆಯನ್ನು
ಕಂಪ್ಯೂಟರ್ ಮೂಲಕ ಎರಡು ಸಿ.ಡಿ.ಗೆ ವರ್ಗಾಯಿಸಿ, ಎರಡು ಸಿ.ಡಿ.ಗಳನ್ನು
ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ.

v) ತನಿಖಾಧಿಕಾರಿಯು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದ್ದು, ಎದುರುದಾರರು ಅವರ ಸಮಜಾಯಿಷಿಯಲ್ಲಿ "ಕಛೇರಿಯ ಕೆಲಸ ಮುಗಿಸಿ ಮನೆಗೆ ಬಂದಾಗ ಶ್ರೀ. ಶಿವಾನಂದರವರು ದೂರವಾಣಿ ಮಾಡಿ ಮನೆಗೆ ಬಂದು ಮಾತನಾಡಿರುತ್ತಾರೆ. ಸದರಿಯವರು ಹೋಟೆಲ್ ಉದ್ಯೋಗ ಮಾಡುತ್ತಿದ್ದು, ಅವರ ಕಡೆಗೆ ನಾನು ಆರೋಗ್ಯ ತಪಾಸಣೆಗಾಗಿ ಕೈಗಡ ಹಣ 50,000/- ರೂ.ಗಳನ್ನು ತೆಗೆದುಕೊಂಡಿರುತ್ತೇನೆ" ಎಂದು ಬರೆದುಕೊಟ್ಟಿರುತ್ತಾರೆ.

vi) ತನಿಖಾಧಿಕಾರಿಯು ಶಿವಾನಂದರವರಿಗೆ ಸಮಜಾಯಿಷಿ ಬರೆದುಕೊಡಲು ತಿಳಿಸಿದ್ದು, ಶಿವಾನಂದರವರು ಅವರ ಸಮಜಾಯಿಷಿಯಲ್ಲಿ "ದೂರುದಾರರು ಡಾಟಾ ಎಂಟ್ರಿ ಆಪರೇಟರ್ ಆಗಿದ್ದರಿಂದ ಪರಿಚಯವಾಗಿದ್ದು, ಅವರು ಅವರ ಮೊಬೈಲ್‌ನಿಂದ ನನ್ನ ಮೊಬೈಲ್‌ಗೆ ಕರೆಮಾಡಿ ಅಫಜಲ್‌ಪುರ ತಹಶೀಲ್ದಾರ್ ಮೇಡಂ ರವರು 50,000/- ರೂ. ನಿನ್ನ ಕೈಯಲ್ಲಿ ಕೊಡಲು ತಿಳಿಸಿರುತ್ತಾರೆ. ನೀನು ಬಂದು ಹಣ ತೆಗೆದುಕೊಂಡು ಹೋಗಿ ತಹಶೀಲ್ದಾರ್ ರವರಿಗೆ ತಲುಪಿಸು ಅಂತ ಹೇಳಿದ್ದರಿಂದ ದೂರುದಾರರಿಂದ ಹಣ ಪಡೆದು ಆ ಹಣವನ್ನು ತಹಶೀಲ್ದಾರ್ ರವರು ಮನೆಗೆ ತಂದುಕೊಡಲು ತಿಳಿಸಿದ ಪ್ರಕಾರ ತಂದು ಕೊಟ್ಟಿರುತ್ತೇನೆ. ಅವರು ಹಣವನ್ನು ಎಣಿಸಿ, ಟೇಬಲ್ ಮೇಲಿದ್ದ ದಿನಪತ್ರಿಕೆಗಳ ನಡುವೆ ಇಟ್ಟರು" ಎಂದು ಬರೆದುಕೊಟ್ಟಿರುತ್ತಾರೆ. ಎದುರುದಾರರು ಮತ್ತು ಶಿವಾನಂದರವರು ಬರೆದುಕೊಟ್ಟ ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳುಸಾಕ್ಷಿ ಅಲ್ಲಗಳೆದಿರುತ್ತಾರೆ ಮತ್ತು ಅವರುಗಳ ನೀಡಿದ ಸಮಜಾಯಿಷಿಯು ತೃಪ್ತಿದಾಯಕವಾಗಿರುವುದಿಲ್ಲವೆಂದು ತನಿಖಾಧಿಕಾರಿಯು ಎದುರುದಾರರನ್ನು ಮತ್ತು ಶಿವಾನಂದರನ್ನು ದಸ್ತಗಿರಿ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು ರಾಸಾಯನಿಕ ತಜ್ಞರ ವರದಿಯನ್ನು ಮತ್ತು ಧ್ವನಿ ವಿಶ್ಲೇಷಣಾ ವರದಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ದಿ: 21/08/2021 ರಂದು, ಈ ಕಚೇರಿಗೆ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲೆಗಳು ಎದುರುದಾರರು ನೀಡಿದ ವರದಿ, ನೆನಪೋಲೆ, ಜ್ಞಾಪನ ಪತ್ರಗಳಾಗಿರುತ್ತವೆ. ಆದರೆ ತನಿಖಾಧಿಕಾರಿಯವರು ಎದುರುದಾರರಿಂದ ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಕಂಡುಬಂದಿರುವುದು ರಾಸಾಯನಿಕ ತಜ್ಞರ ವರದಿಯಲ್ಲಿ ಸ್ಪಷ್ಟವಾಗಿರುತ್ತದೆ ಹಾಗೂ ಎದುರುದಾರರ ಧ್ವನಿಪರೀಕ್ಷಾ ವರದಿಯಲ್ಲಿ

ಎದುರುದಾರರ ಧ್ವನಿಯು ತಾಳೆಯಾಗಿರುವುದಾಗಿ ಕಂಡುಬಂದಿರುತ್ತದೆ. ಎದುರುದಾರರು ನೀಡಿರುವ ಕಾರಣಗಳು ಈ ಪ್ರಕರಣದಿಂದ ಕೈಬಿಡುವ ಬಗ್ಗೆ ಸಮಂಜಸವಾಗಿರುವುದಿಲ್ಲ ಮತ್ತು ಅವರುಗಳು ಸಲ್ಲಿಸಿದ ಆಕ್ಷೇಪಣೆಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

30/11/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.